# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)


MD RGRHCL 01 BIS 03 2010 | 11೦೪3

Date: 29.06.2010

**ಅತೀ ಪ್ರಾಮುಖ್ಯ**

ಇವರಿಗೆ,
ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್.
ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯತ್.

ಮಾನ್ಯರೇ,

ವಿಷಯ : **ಬಸವ ಇಂದಿರಾ ವಸತಿ ಯೋಜನೆಯಡಿ 2010–2011ನೇ ಶ್ರೇಣಿಯ ಮನೆಗಳ ನಿರ್ಮಾಣದ ಗುರಿಯನ್ನು ನಿಗಧಿಪಡಿಸುವ ಬಗ್ಗೆ**

ಉಲ್ಲೇಖ 1 ಸರ್ಕಾರದ ಆದೇಶ ಸಂಖ್ಯೆ: ವಇ 86 ಹೆಚ್‌ಎಎಂ 2009, ಬೆಂಗಳೂರು, ದಿನಾಂಕ: 13.04.2010
2 ಸರ್ಕಾರದ ಪತ್ರ ಸಂಖ್ಯೆ: ವಇ 29 ಹೆಚ್‌ಎಹೆಚ್ 2010, ದಿನಾಂಕ: 18.05.2010.
3 ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 16 ಯೋಉಮಾ 2010, ದಿನಾಂಕ 18.01.2010.

---

ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿರುವ ಎಲ್ಲಾ ಅರ್ಹ ಗುಡಿಸಲು ವಾಸಿಗಳಿಗೆ 2010–11ನೇ ಸಾಲಿನಿಂದ ಪ್ರತಿ ವರ್ಷ 1.50 ಲಕ್ಷ ಮನೆಗಳಂತೆ ಒಟ್ಟು 5 ಲಕ್ಷ ಮನೆಗಳನ್ನು ಮುಂಬರುವ ವರ್ಷಗಳಲ್ಲಿ "ಬಸವ–ಇಂದಿರಾ ವಸತಿ ಯೋಜನೆ" ಅಡಿಯಲ್ಲಿ ನೀಡುವುದಕ್ಕಾಗಿ ಕೇಂದ್ರ ಸರ್ಕಾರದ ಸಹಾಯಧನ, ರಾಜ್ಯ ಸರ್ಕಾರದ ಸಹಾಯಧನ, ಡಿ.ಆರ್.ಐ. ಸಾಲ ಮತ್ತು ಫಲಾನುಭವಿಗಳ ವಂತಿಕೆಯೊಂದಿಗೆ ರೂ. 63,500/–ಗಳ ಘಟಕ ವೆಚ್ಚದಲ್ಲಿ 1.50 ಲಕ್ಷ ಮನೆಗಳ ನಿರ್ಮಾಣದ ಗುರಿಯನ್ನು ನೀಡಿ, ಆದೇಶ ಹೊರಡಿಸಿರುತ್ತದೆ.

ಉಲ್ಲೇಖ ಪತ್ರ (2)ರ ಸರ್ಕಾರದ ಪತ್ರದಲ್ಲಿ ಹೊಸದಾಗಿ ಜಾರಿಗೊಳಿಸುತ್ತಿರುವ "ಬಸವ–ಇಂದಿರಾ ವಸತಿ ಯೋಜನೆ" ಅಡಿ ಫಲಾನುಭವಿಗಳ ಆಯ್ಕೆ, ಅನುಮೋದನೆ, ಅನುಷ್ಠಾನ ಹಾಗೂ ಅನುದಾನ ಬಿಡುಗಡೆಯ ಬಗ್ಗೆ ಹಾಗೂ ಈ ಯೋಜನೆಯಡಿ ಪಾಲಿಸಬೇಕಾದ ನಿಯಮಗಳ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ. ತಪ್ಪದೇ ಈ ಮಾರ್ಗಸೂಚಿಗಳನ್ನು ನಿಯಮಾನುಸಾರ ಪಾಲಿಸಲು ಹಾಗೂ ಈ ಕೆಳಕಂಡ ಅಂಶಗಳಂತೆ ಕೂಡಲೇ ಕ್ರಮ ಕೆಗೆದುಕೊಳ್ಳಲು ತಿಳಿಸಿದೆ.

1. **ಗುರಿ ನಿಗದಿಪಡಿಸುವಿಕೆ ಹಾಗೂ ಅರ್ಹ ಫಲಾನುಭವಿಗಳ ಪಟ್ಟಿ ತಯಾರಿಕೆ ಹಾಗೂ ಗ್ರಾಮಗಳ ಆಯ್ಕೆ ಪ್ರಕ್ರಿಯೆ:**

ಸರ್ಕಾರವು ಎಲ್ಲಾ ಗುಡಿಸಲುವಾಸಿಗಳಿಗೆ ವಸತಿ ಸೌಕರ್ಯವನ್ನು ಮುಂದಿನ ಮೂರು ವರ್ಷಗಳಲ್ಲಿ ನೀಡಲು ಉದ್ದೇಶಿಸಲಾಗಿರುವುದರಿಂದ 2010–11ನೇ ಸಾಲಿಗೆ ಗುರಿಯನ್ನು ನಿಗದಿಪಡಿಸಲಾಗುತ್ತಿದೆ.

ಈಗಾಗಲೇ ರಾಜ್ಯದಲ್ಲಿರುವ ಗುಡಿಸಲು ವಾಸಿಗಳ ಸಮೀಕ್ಷೆಯನ್ನು ನಡೆಸಿದ್ದು, ಸದರಿ ಸಮೀಕ್ಷೆಯಲ್ಲಿ ಕಂಡುಬಂದಿರುವ ಗುಡಿಸಲು ವಾಸಿಗಳ ವಿವರಗಳನ್ನು ನಿಗಮದ ವೆಬ್‌ಸೈಟಿನಲ್ಲಿ ನಮೂದಿಸಿರುತ್ತೀರಿ. ಅದಕ್ಕನುಗುಣವಾಗಿ 11.06.2010ಕ್ಕೆ ಕೊನೆಗೊಂಡಂತೆ ಕಂಡುಬಂದಿರುವ ಗ್ರಾಮಪಂಚಾಯಿತಿವಾರು ಗುಡಿಸಲುವಾಸಿಗಳ ಸಂಖ್ಯೆಯ ಆಧಾರದ ಮೇಲೆ ತಾಲ್ಲೂಕುವಾರು ಗುರಿಯನ್ನು ತಯಾರಿಸಲಾಗಿದೆ.




ನೋಂದಾಯಿತ ಕಛೇರಿ : ನಂ. 205, ಬೀಡಿ ಕಾರ್ಮಿಕರ ಕಾಲೋನಿ ಎದುರು, ಕೊಪ್ಪಳ್ಳಾಪ್ಪ ರಸ್ತೆ, ಬಂಡೆಮಠ, ಕೆಂಗೇರಿ ಉಪನಗರ, ಬೆಂಗಳೂರು – 560 06
☏ : ಕಛೇರಿ 91-80-2271 9385, 2271 9389, 2271 9397, 2271 9399, ಫ್ಯಾಕ್ಸ್ : 91-80-2848 4680
ಈ ಮೇಲ್: rgrhcl@nic.in , ವೆಬ್‌ಸೈಟ್ : http://asharaya.kar.nic.in

ಈ ಸಂಬಂಧ ಪ್ರತಿ ತಾಲ್ಲೂಕುಗಳ ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕಿನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಡಿಯಲ್ಲಿ ಬರುವ ಗ್ರಾಮಪಂಚಾಯಿತಿಗಳ ಗುರಿಗಳನ್ನು ಕ್ರೋಢೀಕರಿಸಿಕೊಂಡು ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಶಾಸಕರ ನೇತೃತ್ವದ ಜಾಗೃತಿ ಸಮಿತಿಯ ಮುಂದೆ ಒಟ್ಟು ಗುರಿಯನ್ನು ಮಂಡಿಸತಕ್ಕದ್ದು. ಜಾಗೃತಿ ಸಮಿತಿಯು ಒಟ್ಟಾರೆ ಗುರಿಯನ್ನು ಲಾಟರಿ ಮೂಲಕ ಆಯ್ಕೆ ಮಾಡುವ ಗ್ರಾಮಗಳಿಗೆ ಈ ಕೆಳಗೆ ತಿಳಿಸಿದಂತೆ ಹಂಚಿಕೆ ಮಾಡಿ ವಸತಿ ಸೌಕರ್ಯ ಕಲ್ಪಿಸಿಕೊಡಲು ತಿಳಿಸಿದೆ.

ಉದಾ: ಒಂದು ತಾಲ್ಲೂಕಿನಲ್ಲಿ 35 ಗ್ರಾಮಪಂಚಾಯಿತಿಗಳಿದ್ದು ಒಟ್ಟು 1600 ಗುಡಿಸಲುಗಳಿವೆ ಎಂದು ಕೊಳ್ಳೋಣ. 35 ಗ್ರಾಮಪಂಚಾಯಿತಿಗಳಲ್ಲಿ 25 ಗ್ರಾಮಪಂಚಾಯಿತಿಗಳು 'ಎ' ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ್ದು 10 ಗ್ರಾಮಪಂಚಾಯಿತಿಗಳು 'ಬಿ' ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ್ದರೆ, 25 ಗ್ರಾಮಪಂಚಾಯಿತಿಯಲ್ಲಿ ಕಂಡು ಬಂದ ಒಟ್ಟು ಗುರಿಯನ್ನು 'ಎ' ಜಾಗೃತಿ ಸಮಿತಿಗೆ ಹಾಗೂ 10 ಗ್ರಾಮಪಂಚಾಯಿತಿಯಲ್ಲಿ ಕಂಡು ಬಂದ ಒಟ್ಟು ಗುರಿಯನ್ನು 'ಬಿ' ಜಾಗೃತಿಸಮಿತಿಗೆ ಮಂಡಿಸಿ ಸದರಿ ಜಾಗೃತಿ ಸಮಿತಿಗಳು ಲಾಟರಿ ಮೂಲಕ ಆಯ್ಕೆ ಮಾಡುವ ಗ್ರಾಮಗಳಿಗೆ ಗುರಿಯನ್ನು ಹಂಚಿಕೆ ಮಾಡಿ ಬಸವ ಇಂದಿರಾ ವಸತಿ ಯೋಜನೆ ಮಾರ್ಗಸೂಚಿಗಳ ಪ್ರಕಾರ ಕಾರ್ಯಕ್ರಮವನ್ನು ಈ ಕೆಳಗೆ ತಿಳಿಸಿದಂತೆ ಅನುಷ್ಠಾನಗೊಳಿಸುವುದು.

- ಮೊದಲಿಗೆ ನಿಗಮದ ವೆಬ್‌ಸೈಟ್‌ನಲ್ಲಿ ನಮೂದಿಸಲಾಗಿರುವ ಗುಡಿಸಲುವಾಸಿಗಳಲ್ಲಿ ಅನರ್ಹರಿರುವುದು ಕಂಡುಬಂದಲ್ಲಿ ಕೂಡಲೇ ಅಂತಹ ಗುಡಿಸಲುವಾಸಿಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ರದ್ದುಪಡಿಸಲು ಅವಕಾಶ ನೀಡಲಾಗಿದೆ. ಆದ್ದರಿಂದ ಅನರ್ಹ ಫಲಾನುಭವಿಗಳೇನಾದರೂ ಇದ್ದಲ್ಲಿ ಅಂತಹವರನ್ನು ಚಾಚೂತಪ್ಪದೇ ರದ್ದುಪಡಿಸಿ ತದನಂತರವೇ ಪರಿಷ್ಕೃತಗೊಂಡ ಪಟ್ಟಿಯನ್ನು ಜಾಗೃತಿ ಸಮಿತಿಯ ಅನುಮೋದನೆಗಾಗಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಗ್ರಾಮಪಂಚಾಯಿತಿಯು ಗ್ರಾಮಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಲ್ಲಿಸುವುದು.
- ಯಾವುದೇ ಕಾರಣಕ್ಕೂ ವೆಬ್‌ಸೈಟ್‌ನಲ್ಲಿ ನಮೂದಾಗಿರುವ ಗುಡಿಸಲುವಾಸಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಪಟ್ಟಿಯನ್ನು ಪರಿಗಣಿಸಬಾರದು ಹಾಗೂ ಯಾವುದೇ ಪಟ್ಟಿಯನ್ನು ಜಾಗೃತಿ ಸಮಿತಿಗೆ ಮಂಡಿಸಬಾರದು. ಒಂದುವೇಳೆ ಈ http://ashraya.kar.nic.in/ashrayanew ವೆಬ್‌ಸೈಟ್‌ನಿಂದ ಪ್ರಿಂಟ್ ಪಡೆಯದ ಪಟ್ಟಿಯನ್ನು ಜಾಗೃತಿಸಮಿತಿಗೆ ಸಲ್ಲಿಸಿದ್ದಲ್ಲಿ ಸಂಬಂಧಪಟ್ಟ ಕಾರ್ಯನಿರ್ವಹಣಾಧಿಕಾರಿಗಳೇ ನೇರ ಜವಾಬ್ದಾರರಾಗುತ್ತಾರೆ. ಅಲ್ಲದೇ ಶಿಸ್ತಿನ ಕ್ರಮಕ್ಕೆ ಒಳಗಾಗುತ್ತಾರೆ.
- ಆಯ್ಕೆಯಾಗುವ ಗ್ರಾಮದಲ್ಲಿನ ಎಲ್ಲಾ ಗುಡಿಸಲುವಾಸಿಗಳಿಗೆ ವಸತಿ ಸೌಕರ್ಯ ನೀಡಬೇಕು. ಆಯ್ಕೆಯಾದ ಗ್ರಾಮಗಳಲ್ಲಿನ ಗುಡಿಸಲುವಾಸಿಗಳಿಗೆ ಗುರಿಯನ್ನು ಹಂಚಿಕೆ ಮಾಡಿ ಉಳಿಯುವ ಗುರಿಯು ಒಂದು ಗ್ರಾಮದ ಗುಡಿಸಲುವಾಸಿಗಳೆಲ್ಲರಿಗೆ ವಸತಿ ನೀಡಲು ಸಾಧ್ಯವಾಗದ ಪಕ್ಷದಲ್ಲಿ ಅಂತಹ ಗುರಿಯನ್ನು ನಿಗಮಕ್ಕೆ ಅಧ್ಯರ್ಪಣೆ ಮಾಡತಕ್ಕದ್ದು.
- ಒಂದುವೇಳೆ ಸಮೀಕ್ಷೆಯಲ್ಲಿ ಕಂಡುಬಂದ ಗುಡಿಸಲುವಾಸಿಗಳಲ್ಲಿ ಅರ್ಹ ಪಟ್ಟಿಯನ್ನು ತಯಾರಿಸಿಕೊಂಡ ನಂತರ ನಿಗದಿಪಡಿಸಲಾಗಿರುವ ಗುರಿಯು ಒಂದುವೇಳೆ ಜಾಸ್ತಿಯಾದ ಪಕ್ಷದಲ್ಲಿ ಅಂತಹ ಗುರಿಯನ್ನು ನಿಗಮಕ್ಕೆ ಅಧ್ಯರ್ಪಣೆ ಮಾಡತಕ್ಕದ್ದು.
- ಒಂದುವೇಳೆ ಗ್ರಾಮಪಂಚಾಯಿತಿಗಳಲ್ಲಿ ಒಂದು, ಎರಡು ಗ್ರಾಮಗಳಿದ್ದು ಈ ಪಂಚಾಯಿತಿಗೆ ನೀಡಲಾದ ಗುರಿಗಿಂತ ಲಭ್ಯವಿರುವ ಗ್ರಾಮಗಳಲ್ಲಿ ಹೆಚ್ಚಿಗೆ ಗುಡಿಸಲುವಾಸಿಗಳು ಲಭ್ಯವಿದ್ದು ಅಂತಹ ಗ್ರಾಮಗಳು ಆಯ್ಕೆಗೊಂಡಲ್ಲಿ ಕ್ರಮಸಂಖ್ಯೆವಾರು ಆಯ್ಕೆ ಮಾಡಿಕೊಂಡು ಉಳಿದವರಿಗೆ ಮುಂದಿನ ಶ್ರೇಣಿಗಳಲ್ಲಿ ವಸತಿ ಸೌಕರ್ಯ ಕಲ್ಪಿಸಿಕೊಡುವುದು.

- ಆಯ್ಕೆಯಾಗುವ ಗ್ರಾಮ/ಗ್ರಾಮಪಂಚಾಯಿತಿಯು ಯಾವುದೇ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ್ದರೂ ಸಹಾ, ಆ ಗ್ರಾಮದ/ಗ್ರಾಮಪಂಚಾಯಿತಿಯ ಅನುಷ್ಠಾನವು ಸಂಬಂಧಪಟ್ಟ ತಾಲ್ಲೂಕಿನ ಕಾರ್ಯನಿರ್ವಹಣಾಧಿಕಾರಿಗಳಾಗಿದ್ದಾಗಿರುತ್ತದೆ.
- ಉಳಿದಂತೆ ಫಲಾನುಭವಿಗಳ ಆಯ್ಕೆ, ಗ್ರಾಮಗಳ ಆಯ್ಕೆ ಬಗ್ಗೆ ಉಲ್ಲೇಖಿತ (2)ರ ಸುತ್ತೋಲೆಯನ್ನು ಗಮನಿಸುವುದು.

2. <u>ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಮುದ್ರಿಸಿಕೊಳ್ಳುವ ಬಗ್ಗೆ !</u>

ಜಾಗೃತಿ ಸಮಿತಿಯಿಂದ ಆಯ್ಕೆಯಾದ ಗ್ರಾಮಗಳಲ್ಲಿನ ಫಲಾನುಭವಿಗಳಿಗೆ ನಿಯಮಾನುಸಾರ ದಾಖಲೀಕರಣಗೊಳಿಸಿ ನಂತರ ನಿಗಮದ ವೆಬ್‌ಸೈಟ್‌ನಲ್ಲಿ ವಿವರಗಳನ್ನು ನಮೂದಿಸಿ ಪಟ್ಟಿಯನ್ನು ಕರಡು ಪ್ರತಿಯಾಗಿ ಮುದ್ರಿಸಿಕೊಂಡು ಪರಿಶೀಲಿಸಿ ಎಲ್ಲಾ ವಿವರಗಳು ಸರಿಯಿರುವ ಬಗ್ಗೆ ಖಾತರಿಗೊಂಡ ನಂತರ ಅಂತಿಮ ಪಟ್ಟಿಯನ್ನು ಮುದ್ರಿಸಿಕೊಂಡು ನಿಗಮದ ಅನುಮೋದನೆ ಪಡೆದುಕೊಳ್ಳತಕ್ಕದ್ದು.

3. <u>ಫಲಾನುಭವಿಗಳ ಆಯ್ಕೆಗೆ ನಿಗದಿಗೊಳಿಸಿದ ದಿನಾಂಕಗಳು :</u>

ನಿಯಮಾನುಸಾರ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಯಾವುದೇ ಕಾರಣಕ್ಕೂ ವಿಳಂಬ ಮಾಡದಾರದೆಂಬ ದೃಷ್ಟಿಯಿಂದ ಅರ್ಹ ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆ ಮಾಡಲು ಈ ಕೆಳಕಂಡ ಅಧಿಕಾರಿ/ಪ್ರಾಧಿಕಾರಗಳಿಗೆ ಅವರ ಮುಂದೆ ತೋರಿಸಿರುವ ದಿನಾಂಕದೊಳಗೆ ಆಯ್ಕೆ ಪ್ರಕ್ರಿಯೆ ಅಂತಿಮಗೊಳಿಸಬೇಕೆಂದು ಸೂಚಿಸಲಾಗಿದೆ.

| ಕ್ರಮ ಸಂಖ್ಯೆ | ಅಧಿಕಾರಿ/ಪ್ರಾಧಿಕಾರ | ಅಂತಿಮ ದಿನಾಂಕ |
|---|---|---|
| 1. | ಗುಡಿಸಲುವಾಸಿಗಳ ಪಟ್ಟಿಯನ್ನು ಗ್ರಾಮಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಲು | 15.07.2010 |
| 2 | ಒಂದು ವೇಳೆ ಗ್ರಾಮಪಂಚಾಯಿತಿಯು 15.07.2010ರೊಳಗೆ ಆಯ್ಕೆ ಮಾಡದಿದ್ದಲ್ಲಿ ಸಂಬಂಧಿಸಿದ ತಾಲ್ಲೂಕಿನ ಕಾರ್ಯ ನಿರ್ವಹಣಾಧಿಕಾರಿಗಳು ಸದರಿ ಗುಡಿಸಲುವಾಸಿಗಳ ಪಟ್ಟಿಯನ್ನು ಜಾಗೃತಿ ಸಮಿತಿಗೆ ಮಂಡಿಸಲು | 31.07.2010 |
| 3. | ವಿಧಾನಸಭಾ ಜಾಗೃತಿ ಸಮಿತಿಯು ಅನುಮೋದನೆ ನೀಡಲು | 15.08.2010 |
| 4. | ಅನುಮೋದನೆಗೊಂಡ ಫಲಾನುಭವಿಗಳಿಗೆ ದಾಖಲೀಕರಣಗೊಳಿಸಿ ಅಂತಿಮವಾಗಿ ನಿಗಮದ ಅನುಮೋದನೆ ಪಡೆದುಕೊಳ್ಳಲು | 31.08.2010 |

ಮೇಲೆ ತಿಳಿಸಿದಂತೆ ಒಂದು ವೇಳೆ ನಿಗದಿತ ಅವಧಿಯೊಳಗೆ ಫಲಾನುಭವಿಗಳನ್ನು ಆಯ್ಕೆಗೊಳಿಸಿ ದಾಖಲೀಕರಣ ಮಾಡಿ ನಿಗಮದಿಂದ ಅನುಮೋದನೆಯನ್ನು ದಿನಾಂಕ 31.08.2010ರೊಳಗೆ ಪಡೆದುಕೊಳ್ಳದಿದ್ದಲ್ಲಿ ನೀಡಲಾದ ಗುರಿಯನ್ನು ನಿಗಮದಿಂದ ರದ್ದುಪಡಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಎನ್.ಎಸ್. ಮಹದೇವ ಪ್ರಸಾದ್
ಪ್ರಧಾನ ವ್ಯವಸ್ಥಾಪಕರು
(ಕಾರ್ಯಕ್ರಮ ಅನುಷ್ಠಾನ)

ಪ್ರತಿ : ಎಲ್ಲಾ ವಿಧಾನಸಭಾ ಕ್ಷೇತ್ರದ ಶಾಸಕರುಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
ಅಡಕಗಳು : ಉಲ್ಲೇಖಿತ ಪತ್ರಗಳು ಹಾಗೂ ಅನುಬಂಧ 'ಅ'